ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/123/ಆಸ/ಸಿಎಎಸ್/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 02.03.2024.

## ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ/ಸಹ ಪ್ರಾಧ್ಯಾಪಕರಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಶೈಕ್ಷಣಿಕ ಹಂತ 13ಎ ಮತ್ತು 14 ರ ಸ್ಥಾನೀಕರಣ ಮಂಜೂರಾತಿಗೆ ಸಂಬಂಧಿಸಿದಂತೆ ನಡೆಸುವ ಸಂದರ್ಶನಕ್ಕೆ ಹಾಜರಾಗುವ ಬಗ್ಗೆ.

ಉಲ್ಲೇಖ:
1. 2018 ರ ಯುಜಿಸಿ ಮಾರ್ಗಸೂಚಿ ದಿನಾಂಕ: 18-07-2018.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 123 ಡಿಸಿಇ 2020, ದಿ:02.03.2021.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರಲ್ಲಿ **ಯುಜಿಸಿ ನಿಯಮಗಳನ್ವಯ** ಶೈಕ್ಷಣಿಕ ಹಂತ 13ಎ ಮತ್ತು 14ಕ್ಕೆ ಸ್ಥಾನೀಕರಣ (ಸಿಎಎಸ್) ನೀಡಲು ಅನುಮತಿ ನೀಡಲಾಗಿರುತ್ತದೆ. ಅದರನ್ವಯ ಅರ್ಹ ಸಹ/ಸಹಾಯಕ ಪ್ರಾಧ್ಯಾಪಕರಿಗೆ ಶೈಕ್ಷಣಿಕ ಹಂತ 13ಎ ಮತ್ತು 14ನ್ನು ಮಂಜೂರು ಮಾಡುವ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಅಂತೆಯೇ ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು (ನೃಪತುಂಗ ವಿಶ್ವವಿದ್ಯಾಲಯ) ಮತ್ತು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು (ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ) ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕರುಗಳು "Opt in/ Opt Out" **ಪ್ರಕ್ರಿಯೆ ನಿರ್ಣಾಯಕವು ಶೀಘ್ರದಲ್ಲೇ ಪ್ರಾರಂಭವಾಗುವ ನಿರೀಕ್ಷೆ ಇರುವ ಹಿನ್ನೆಲೆಯಲ್ಲಿ ಅರ್ಹತಾ ದಿನಾಂಕ ಹೊಂದಿರುವ ಅರ್ಹ ಬೋಧಕರ ಪ್ರಸ್ತಾವನೆಗಳನ್ನು ಮಾತ್ರ ಸಂದರ್ಶನಕ್ಕೆ ಪರಿಗಣಿಸಲಾಗಿರುತ್ತದೆ.** ಸಂದರ್ಶನಕ್ಕೆ ಅರ್ಹರಾದ ಸಹ/ಸಹಾಯಕ ಪ್ರಾಧ್ಯಾಪಕರ ವಿವರಗಳನ್ನು ಅನುಬಂಧ-01 ಮತ್ತು 02 ರಲ್ಲಿ ನಮೂದಿಸಿ ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುತ್ತದೆ.

**ಸಂದರ್ಶನಕ್ಕೆ ಅರ್ಹರಾಗಿರುವ** ಸಹ/ಸಹಾಯಕ ಪ್ರಾಧ್ಯಾಪಕರು **ವಿಷಯವಾರು ನಿಗದಿಪಡಿಸಿರುವ ದಿನಾಂಕಗಳಂದು** ***ಪೂರ್ವಾಹ್ನ 10.00 ಗಂಟೆಗೆ ಕೇಂದ್ರ ಕಛೇರಿಯಲ್ಲಿ*** ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವಂತೆ ಈ ಮೂಲಕ ಸೂಚಿಸಲಾಗಿದೆ.

**ಸಂದರ್ಶನದಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲೆಗಳು**

1. ರೂ.7000/-, ರೂ.8000/- ಮತ್ತು ರೂ.9000/- ಎಜಿಪಿ ಮಂಜೂರಾತಿ ಆದೇಶದ ಪ್ರತಿ & ಮಹಾಲೇಖಪಾಲರು ನಿಗಧಿಪಡಿಸಿರುವ ವೇತನ ಪಟ್ಟಿ. ಆರ್‌ಸಿ/ಎಸ್‌ಟಿಸಿ/ಎಫ್‌ಡಿಪಿ ಕೋರ್ಸುಗಳನ್ನು ಪೂರೈಸಿರುವ ಬಗ್ಗೆ ಮೂಲ ದಾಖಲಾತಿ ಪ್ರತಿ.



Scanned with OKEN Scanner

೨. ಪಿಹೆಚ್.ಡಿ ಪದವಿಗೆ ಸಂಬಂಧಿಸಿದಂತೆ ಯುಜಿಸಿ ಹೊರಡಿಸಿರುವ UGC (Minimum Standards and Procedure for awards of MPhil/PhD Degree) Regulation 2009, Dated : 11-07-2009 and subsequent amendments ಮತ್ತು UGC (Minimum Standards and Procedure for awards of MPhil/PhD Degree) Regulation 2016, Dated : 05-05-2016 and subsequent amendments ರನ್ವಯ ಪಿಹೆಚ್‌ಡಿ ಪದವಿ ಸಂಬಂಧಿತ ಎಲ್ಲಾ ದಾಖಲಾತಿಗಳು (ಇಲಾಖಾ ಅನುಮತಿ ಪತ್ರ, ನೋಂದಣಿ ಪತ್ರ, ಕೋರ್ಸ್ ವರ್ಕ್‌ನ ಮೂಲ ಅಂಕಪಟ್ಟಿ, ಅಧಿಸೂಚನೆ ಮೂಲ ಪ್ರತಿ, ಘಟಿಕೋತ್ಸವ ಮೂಲ ಪ್ರತಿ ಮತ್ತು ಮಹಾ ಪ್ರಬಂಧದ ಪ್ರತಿ, ಇತ್ಯಾದಿ)

೩. ISSN No. ಒಳಗೊಂಡಂತೆ ಪ್ರಕಟಿಸಿರುವ ಲೇಖನಗಳ ಮೂಲ ದಾಖಲೆ ಮತ್ತು ದಿನಾಂಕ: 14-06-2019 ರ ಯುಜಿಸಿ ಸೂಚನಾ ಪತ್ರದಲ್ಲಿ ತಿಳಿಸಿರುವಂತೆ ಯುಜಿಸಿ ಕೇರ್-ಲಿಸ್ಟೆಡ್ (UGC- CARE listed Journals) ಜರ್ನಲ್ಸ್‌ನಲ್ಲಿ ಪ್ರಕಟಿಸಿರುವ ಲೇಖನಗಳು ಹಾಗೂ ಪ್ರಾಂಶುಪಾಲರಿಂದ ದೃಢೀಕರಿಸಿದ ನಕಲು ಪ್ರತಿಗಳು.

4. ಮೌಲ್ಯಮಾಪನ ಅವಧಿ 03 ವರ್ಷ ಪೂರ್ಣಗೊಳ್ಳುವುದಕ್ಕೂ (Assessment Period) ಮುಂಚಿತವಾಗಿ ಪ್ರಸ್ತಾವನೆ ಸಲ್ಲಿಸಿರುವ ಸಹ/ಸಹಾಯಕ ಪ್ರಾಧ್ಯಾಪಕರು ಉಳಿಕೆ ಮೌಲ್ಯಮಾಪನ ಅವಧಿ (Assessment Period) ಗೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ಪೂರಕವಾದ ಎಲ್ಲಾ ಮಾಹಿತಿ ಹಾಗೂ ದಾಖಲೆಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಂದರ್ಶನದ ಸಂದರ್ಭದಲ್ಲಿ ಹಾಜರು ಪಡಿಸತಕ್ಕದ್ದು, ಅಪೂರ್ಣ ಮಾಹಿತಿ/ದಾಖಲೆಗಳಿದ್ದಲ್ಲಿ ಸಂದರ್ಶನದಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ.

5. ಈಗಾಗಲೇ ಪ್ರಾಧ್ಯಾಪಕ ಹುದ್ದೆಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ನಮೂದಿಸಲಾಗಿರುವ ಶೈಕ್ಷಣಿಕ/ಸಂಶೋಧನಾ ಅಂಕಗಳಿಗೆ ಪೂರಕವಾದ ಎಲ್ಲಾ ದಾಖಲೆಗಳು ಹಾಗೂ ಮೂಲ ಪ್ರತಿ. (Appendix–II, Table-1 Activities-Year wise, Table-2 Academic /Research Score)

6. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ/ ಸಂಬಂಧಿಸಿದ ಮೇಲಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ಪ್ರತಿ.

7. ಪ್ರಾಧ್ಯಾಪಕರ ಹುದ್ದೆಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಒದಗಿಸಿರುವ ಲೇಖನಗಳನ್ನು ಮಾತ್ರ ಸಂದರ್ಶನಕ್ಕೆ ಪರಿಗಣಿಸಲಾಗುವುದು. ಸದರಿ ಲೇಖನಗಳನ್ನು ಮಾತ್ರ ಸಂದರ್ಶನದಲ್ಲಿ ಹಾಜರುಪಡಿಸತಕ್ಕದ್ದು.

೮. ಪ್ರಸ್ತಾವನೆಯಲ್ಲಿ ಇಲ್ಲದ ಲೇಖನಗಳನ್ನು ಹಾಜರುಪಡಿಸಿದ್ದಲ್ಲಿ ಅನರ್ಹಗೊಳಿಸಲಾಗುವುದು.

೯. ಸಂದರ್ಶನ ಪ್ರಕ್ರಿಯೆಯಲ್ಲಿ ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.



Scanned with OKEN Scanner

10. ಪ್ರಸ್ತಾವನೆಯೊಂದಿಗೆ ಸಲ್ಲಿಸಿರುವ ಸಂಶೋಧನ ಲೇಖನಗಳನ್ನು (ಆನ್-ಲೈನ್/ಆಫ್ ಲೈನ್) ಪ್ರಕಟಗೊಂಡಿರುವ ಲೇಖನಗಳ ವೆಬ್-ಸೈಟ್ ಲಿಂಕ್/ಯುಆರ್‌ಎಲ್/ ಡಿಒಐ ಲಿಂಕ್/ಲೇಖನಗಳು ಪ್ರಕಟಿಸಿರುವ ಜರ್ನಲ್ ಮುಖಪುಟ ಮತ್ತು ಅದರ ಹಿಂದಿನ ಪುಟ ಹಾಗೂ ಲೇಖನದ ಜೆರಾಕ್ಸ್ ಪ್ರತಿಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಂದರ್ಶನದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

***ವಿ.ಸೂ.: ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಯಾವುದೇ ಭತ್ಯೆಗೆ ಅರ್ಹರಿರುವುದಿಲ್ಲ.***

*(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

ಇವರಿಗೆ :

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರುಗಳಿಗೆ – *ತಮ್ಮ ಕಾಲೇಜಿನ ಸಂಬಂಧಿಸಿದ ಸಹಾಯಕ/ಸಹ ಪ್ರಾಧ್ಯಾಪಕರುಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ.*
2. ಅನುಬಂಧದಲ್ಲಿ ಲಗತ್ತಿಸಿರುವ ಎಲ್ಲಾ ಸಹಾಯಕ/ಸಹ ಪ್ರಾಧ್ಯಾಪಕರುಗಳಿಗೆ *(ಸಂಬಂಧಿಸಿದ ಪ್ರಾಂಶುಪಾಲರ ಮುಖಾಂತರ)* – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – *ಮಾಹಿತಿಗಾಗಿ.*
4. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – *ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.*

ಪ್ರತಿಯನ್ನು :

1. ಮಾನ್ಯ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ/ ಜಂಟಿ ನಿರ್ದೇಶಕರು (ಶೈಕ್ಷಣಿಕ) ಇವರುಗಳ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ.
2. ಕಛೇರಿ ಪ್ರತಿ.



Scanned with OKEN Scanner

## ಅನುಬಂಧ-01

**ದಿನಾಂಕ: 04-03-2024**

ಸಹಾಯಕ ಪ್ರಾಧ್ಯಾಪಕರಿಗೆ ಶೈಕ್ಷಣಿಕ ಹಂತ 12 ರಿಂದ ಶೈಕ್ಷಣಿಕ ಹಂತ 13ಎ ಹಂತಕ್ಕೆ

| ಕ್ರಸಂ | ಹೆಸರು | ವಿಷಯ | ಕಾಲೇಜಿನ ಹೆಸರು |
|---|---|---|---|
| 01 | ಡಾ ನಂದಿತಾ ಪ್ರಸಾದ್ | ಗಣಕ ವಿಜ್ಞಾನ | ಸರ್ಕಾರಿ ವಿಜ್ಞಾನ ಕಾಲೇಜು ಬೆಂಗಳೂರು |
| 02 | ಡಾ ಅಶೋಕ ಎಸ್ ಬಿ | ಗಣಕ ವಿಜ್ಞಾನ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಬೆಂಗಳೂರು |
| 3 | ಡಾ ಕುರ್ನಾಳ್ ಡಿ ಸಿ | ಅರ್ಥಶಾಸ್ತ್ರ | ಮಹಾರಾಣಿ ಮಹಿಳಾ ಕಲಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬೆಂಗಳೂರು. |

## ಅನುಬಂಧ-02

**ದಿನಾಂಕ: 04-03-2024**

ಸಹ ಪ್ರಾಧ್ಯಾಪಕರಿಗೆ ಶೈಕ್ಷಣಿಕ ಹಂತ 13ಎ ರಿಂದ ಶೈಕ್ಷಣಿಕ ಹಂತ 14 ಹಂತಕ್ಕೆ

| ಕ್ರಸಂ | ಹೆಸರು | ವಿಷಯ | ಕಾಲೇಜಿನ ಹೆಸರು |
|---|---|---|---|
| 01 | ಡಾ ಸುರೇಶ್ ಕುಮಾರ್ ಸಿ | ಸಸ್ಯಶಾಸ್ತ್ರ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಬೆಂಗಳೂರು |
| 02 | ಡಾ ವಿಜಯ್ ಕುಮಾರ್ ಜಿ | ಭೌತಶಾಸ್ತ್ರ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಬೆಂಗಳೂರು |
| 3 | ಡಾ ಎ ಆರ್ ವಿಜಯಲಕ್ಷ್ಮೀ | ಗಣಿತಶಾಸ್ತ್ರ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಬೆಂಗಳೂರು |

*ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**



Scanned with OKEN Scanner